


# ಅಂತಾರಾಷ್ಟ್ರೀಯ ರಂಗಸಂದೇಶ – 2016
# ಅನತೋಲಿ ವಸಲೇವ್

ನಮಗೆ ರಂಗಭೂಮಿಯ ಅವಶ್ಯಕತೆ ಇದೆಯೇ?

ರಂಗಭೂಮಿಯಲ್ಲಿ ನಿರಾಶೆಗೊಂಡ ಸಾವಿರಾರು ವೃತ್ತಿಪರರು ಮತ್ತು ಅದರಿಂದ ಬೇಸರಗೊಂಡ ಮಿಲಿಯಾಂತರ ಜನರು ತಮ್ಮನ್ನು ತಾವೇ ಕೇಳಿಕೊಳ್ಳುತ್ತಿರುವ ಪ್ರಶ್ನೆ ಅದು.

ಅದು ನಮಗೆ ಏಕೆ ಬೇಕು?

ನಗರದ ಚೌಕಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ನಡೆಯುತ್ತಿರುವ ನಿಜಬದುಕಿನ ದುರಂತಗಳಿಗೆ ಹೋಲಿಸಿದಾಗ ರಂಗದ ಮೇಲಿನ ದೃಶ್ಯ ಅರ್ಥಹೀನವೆನಿಸುತ್ತದೆ.

ಅದರಿಂದ ನಮಗೇನು?

ರಂಗಮಂದಿರದಲ್ಲಿ ಸುವರ್ಣ ವೇದಿಕೆ ಮತ್ತು ಕೈಸಾಲೆ, ಮಖಮಲ್ಲಿನ ಆರಾಮ ಕುರ್ಚಿಗಳು ವೇದಿಕೆಯ ಕೊಳಕಾದ ಪಾರ್ಶ್ವಗಳು ಸಂಸ್ಕರಣಗೊಂಡ ನಟರ ಶಾರೀರ ಅಥವಾ ಆ ಎಲ್ಲದರ ತಿರುಗು ಮುರುಗು, ಒಂದಿಷ್ಟು ವಿಭಿನ್ನವಾಗಿ ಕಾಣುವಂತಹುದು. ಒಳಗೆ ಮಣ್ಣು ಮತ್ತು ರಕ್ತಲೇಪಿತ ಕಪ್ಪುಪೆಟ್ಟಿಗೆ, ಆವೇಶಪೂರಿತ ನಗ್ನ ದೇಹಗಳ ಗುಂಪು.

ಅದು ನಮಗೆ ಏನು ಹೇಳಬಲ್ಲುದು?

ಎಲ್ಲವೂ!

ರಂಗಭೂಮಿ ಎಲ್ಲವನ್ನು ಹೇಳಬಲ್ಲುದು.

ಸ್ವರ್ಗದಲ್ಲಿ ದೇವತೆಗಳ ವಾಸ ಹೇಗೆ? ಭೂಗತ ಗುಹೆಗಳಲ್ಲಿ ಮರೆತ ಬಂಧಿಗಳು ಸೊರಗುತ್ತಿರುವುದು ಹೇಗೆ? ಆಕಾಂಕ್ಷೆ ಉನ್ನತಿಯ ಕಡೆಗೆ ಕೊಂಡೊಯ್ಯುವುದು ಹೇಗೆ? ಪ್ರೀತಿಯಿಂದ ನಾಶವಾಗುವುದು ಹೇಗೆ? ಜಗತ್ತಿನಲ್ಲಿ ಒಳ್ಳೆಯವರನ್ನು ಬಯಸದಿರುವುದು ಹೇಗೆ? ವಂಚನೆ ಪ್ರಾಬಲ್ಯಕ್ಕೆ ಬರುವುದು ಹೇಗೆ? ಕಂದಮ್ಮಗಳು ನಿರಾಶ್ರಿತ ಶಿಬಿರಗಳಲ್ಲಿ ಸೊರಗುತ್ತಿರುವಾಗ ಬಹುಅಂತಸ್ತಿನ ಕಟ್ಟಡಗಳಲ್ಲಿ ಜನ ಹೇಗೆ ವಾಸಿಸುತ್ತಾರೆ? ಮತ್ತೆ ಅವರೆಲ್ಲರೂ ಹೇಗೆ ಮರುಭೂಮಿಗೆ ಮರಳಿ ಹೋಗುತ್ತಾರೆ, ದಿನಕಳೆದಂತೆ ಆಪ್ತರನ್ನು ಒತ್ತಾಯ ಪೂರ್ವಕವಾಗಿ ಹೇಗೆ ಅಗಲಬೇಕಾಗುತ್ತದೆ – ರಂಗಭೂಮಿ ಎಲ್ಲವನ್ನೂ ಹೇಳುತ್ತದೆ.

ರಂಗಭೂಮಿ ಎಂದೂ ಇತ್ತು ಮತ್ತು ನಿರಂತರವಾಗಿರುತ್ತದೆ.

ಕಳೆದ 50 –70 ವರ್ಷಗಳಿಂದೀಚೆಗೆ ರಂಗಭೂಮಿಯ ಅಗತ್ಯ ವಿಶೇಷವಾಗಿದೆ. ಯಾಕೆಂದರೆ ಸಾರ್ವಜನಿಕ ಕಲೆಗಳಲ್ಲಿ ನೋಡಿದಾಗ ನಿಮಗೆ ತಕ್ಷಣ ಗೋಚರಿಸುವುದು ರಂಗಭೂಮಿಯೆ. ಬಾಯಿಂದ ಬಾಯಿಗೆ ಆಡುವ ಮಾತು, ಕಣ್ಣಿಂದ ಕಣ್ಣಿಗೆ ನೋಡುವ ಇಣುಕು ನೋಟ, ಕೈಯಿಂದ ಕೈ, ದೇಹದಿಂದ ದೇಹಕ್ಕೆ ಮಾಡುವ ಸಂಜ್ಞೆ , ಮಧ್ಯವರ್ತಿಯ ಅವಶ್ಯಕತೆ ಇಲ್ಲದೇ – ಮನುಷ್ಯರ ನಡುವೆ ಪಾರದರ್ಶಕ ಬೆಳಕನ್ನು ಸ್ಥಾಪಿಸುತ್ತದೆ. ಅದು ದಕ್ಷಿಣಕ್ಕೆ ಅಥವಾ ಉತ್ತರಕ್ಕೆ, ಪಶ್ಚಿಮ ಅಥವಾ ಪೂರ್ವಕ್ಕಷ್ಟೆ ಸಂಬಂಧಿಸಿದ್ದಲ್ಲ.

ಜಗತ್ತಿನ ನಾಲ್ಕು ಮೂಲೆಗಳಿಂದಲೂ ಪ್ರಕಾಶಿಸುವ ಅದು ಮೂಲತಃ ಸ್ವಯಂಪ್ರಭೆ. ವಿರೋಧಿಸುವವರಿರಲಿ ಆಪ್ತರಿರಲಿ, ಯಾರೊಬ್ಬರೂ ತಕ್ಷಣ ಅದನ್ನು ಗುರುತಿಸಬಹುದಾಗಿದೆ.

ಮತ್ತು ಸದಾ ವಿಶಿಷ್ಟವಾಗುಳಿಯುವ ರಂಗಭೂಮಿಯ ಅಗತ್ಯ ನಮಗಿದೆ. ಹಲವು ನಮೂನೆಯ ರಂಗಭೂಮಿ ನಮಗೆ ಬೇಕು.

ಈಗಲೂ ನಾನು ಯೋಚಿಸುತ್ತೇನೆ ಎಲ್ಲಾ ನಮೂನೆಗಳ ಎಲ್ಲಾ ರೂಪಗಳ ರಂಗಭೂಮಿ ಪೈಕಿ ಪುರಾತನ ರಂಗಭೂಮಿಗೆ ಬಹು ಬೇಡಿಕೆ ಇದೆ. ರೂಢಿಗತ ರಂಗಭೂಮಿಯನ್ನು "ನಾಗರೀಕ" ರಾಷ್ಟ್ರಗಳ ರಂಗಭೂಮಿ ಅಸ್ವಾಭಾವಿಕವಾಗಿ ವಿರೋಧಿಸಬೇಕಾಗಿಲ್ಲ. ಜಾತ್ಯಾತೀತ ಸಂಸ್ಕೃತಿ ಎನ್ನುವುದು ಈಗ ಹೆಚ್ಚು ಹೆಚ್ಚು ಶಕ್ತಿಗುಂದುತ್ತಿದೆ. ಸರಳ ಅಸ್ತಿತ್ವಗಳನ್ನು ಮತ್ತು ಒಂದಲ್ಲ ಒಂದು ದಿನ ಅವುಗಳನ್ನು ಸಂಧಿಸುತ್ತೇವೆ ಎನ್ನುವ ನಮ್ಮ ಭರವಸೆಯನ್ನು ಕ್ರಮೇಣ ಸರಿಸಿ ಅದರ ಬದಲಾಗಿ "ಸಾಂಸ್ಕೃತಿಕ ಮಾಹಿತಿ" ಎಂದು ಕರೆಸಿಕೊಳ್ಳುವಂತಹದ್ದೇನೋ ಪುನರ್ ಸ್ಥಾಪಿತಗೊಳ್ಳುತ್ತದೆ.

ಆದರೆ, ನನಗೀಗ ಸ್ಪಷ್ಟವಾಗಿ ಕಾಣುತ್ತಿದೆ. ರಂಗಭೂಮಿ ತನ್ನ ಬಾಗಿಲುಗಳನ್ನು ವಿಸ್ತಾರವಾಗಿ ತೆರೆದುಕೊಳ್ಳುತ್ತಿದೆ. ಸಮಸ್ತರಿಗೂ ಮತ್ತು ಪ್ರತಿಯೊಬ್ಬರಿಗೂ ಅಲ್ಲಿ ಪ್ರವೇಶ ಉಚಿತ.

ಉಪಕರಣಗಳನ್ನು, ಗಣಕಯಂತ್ರಗಳನ್ನು ದೂರತಳ್ಳಿ ರಂಗ ಮಂದಿರಕ್ಕೆ ನಡೆಯಿರಿ. ಸಾಲಾದ ಆಸನಗಳಲ್ಲಿ, ಕೈಸಾಲೆಯಲ್ಲಿ ಕುಳಿತುಕೊಳ್ಳಿ, ಮಾತುಗಳನ್ನು ಆಲಿಸಿ ಮತ್ತು ಜೀವಂತ ಆಕಾರಗಳನ್ನು ನೋಡಿ! – ನಿಮ್ಮೆದುರುಗಿದೆ ರಂಗಭೂಮಿ– ಅಲಕ್ಷ್ಯ ಮಾಡದಿರಿ, ಭಾಗಿಯಾಗುವ ಒಂದೇ ಒಂದು ಅವಕಾಶ ತಪ್ಪಿಸಿಕೊಳ್ಳದಿರಿ. ಪ್ರಾಯಶಃ ವ್ಯರ್ಥ ಮತ್ತು ಒತ್ತಡದ ಬದುಕಿನಲ್ಲಿ ಹಂಚಿಕೊಳ್ಳಲು ಇರುವ ಅತ್ಯಮೂಲ್ಯ ಅವಕಾಶ ಇದು.

ನಮಗೆ ಎಲ್ಲಾ ಬಗೆಯ ರಂಗಭೂಮಿಯ ಅವಶ್ಯಕತೆ ಇದೆ.

ಖಚಿತವಾಗಿ ಯಾರಿಗೂ ಬೇಡವಾದ ಒಂದೇ ಒಂದು ರಂಗಭೂಮಿ ಎಂದರೆ – ನನ್ನ ಅರ್ಥದಲ್ಲಿ ರಾಜಕೀಯದ ರಂಗಾಟ, ರಾಜಕೀಯದ "ಇಲಿಬೋನು"ಗಳ ರಂಗಭೂಮಿ, ಪುಡಾರಿಗಳ ವ್ಯರ್ಥ ರಂಗಭೂಮಿ. ಭೀತಿ ಹುಟ್ಟಿಸುವ ದಿನನಿತ್ಯದ – ವೈಯಕ್ತಿಕ ಅಥವಾ ಸಾಮೂಹಿಕ ರಂಗಭೂಮಿ ಖಂಡಿತ ನಮಗೆ ಬೇಡ, ಬೀದಿಗಳಲ್ಲಿ, ಚೌಕಗಳಲ್ಲಿ ಶವಗಳ ಮತ್ತು ರಕ್ತಸಿಕ್ತ ದೃಶ್ಯಗಳ ರಂಗಭೂಮಿ ನಮಗೆ ಬೇಡ, ರಾಜಧಾನಿಯಲ್ಲಾಗಲಿ, ನಾಡಿನ ಭಾಗಗಳಲ್ಲಾಗಲಿ, ಧರ್ಮನಿಷ್ಠರ ಅಥವ ಜನಾಂಗೀಯ ಗುಂಪುಗಳ ನಡುವಿನ ಸಂಘರ್ಷದ ಪೊಳ್ಳು ರಂಗಭೂಮಿಯೂ ಬೇಡ.

–*–*–*–

ಪ್ರೊ. ಅನತೋಲಿ ವಸಲೇವ್ ಅಂತಾರಾಷ್ಟ್ರ ಖ್ಯಾತಿಯ ರಂಗನಿರ್ದೇಶಕರು, ರಂಗಭೂಮಿಗೆ ಸಂಬಂಧಿಸಿದ ಸಂಶೋಧನೆಯನ್ನೆ ಪ್ರಮುಖವಾಗಿ ಮಾಡುವ ಸ್ಕೂಲ್ ಆಫ್ ಡ್ರಮೆಟಿಕ್ ಆರ್ಟ್ಸ್ (ಮಾಸ್ಕೊ) ಸಂಸ್ಥೆಯ ಸ್ಥಾಪಕರು.

–**–**–

*Translation from Russian original to English -* ***Natalia Isaeva***
*Translation to Kannada -* ***Sreekanta Gundappa***
*Photo Credit: Laurencine Lot-Collection Comédie-Française*


**ಕನ್ನಡಕ್ಕೆ ಶ್ರೀಕಂಠ ಗುಂಡಪ್ಪ**

#57, 3ನೇ ಮೇನ್, 3ನೇ ಕ್ರಾಸ್, ಬ್ಯಾಂಕ್ ಕಾಲೋನಿ,
ಬೋಗಾದಿ, ಮೈಸೂರು–570026
ಮೊ: 9986006625

sreekanta.gundappa@gmail.com